'ಮನೇಲಿ ನಾಯಿ ಒಂದೇಯಿದೆ' ಎಂದು ಕಳವಳಿಸುವುದು; ಹೋಟೆಲಿಗೆ ಹೋದರೆ ರೊಟ್ಟಿ ಪಾರ್ಸಲು ಮಾಡಿಸುವುದು, ಮಾಂಸದಂಗಡಿಗೆ ಹೋದರೆ ಅದಕ್ಕೆ ಬೇಕಾದ ಎಲುಬು ಹಾಕಿಸಿಕೊಳ್ಳುವುದು – ಎಲ್ಲದಕ್ಕೂ ನಾಯಿನೆಪ. ಸಣ್ಣಪುಟ್ಟ ಮನೆಗೆಲಸಕ್ಕೆ ಕೂಗಿದರೂ ಕೇಳಿಸಿಕೊಳ್ಳದ ಮಕ್ಕಳು, ಸ್ಪರ್ಧೆಯ ಮೇಲೆ ಉಪಚರಿಸುತ್ತಿದ್ದರು. ಅದರ ಸೇವೆಗೆಂದೇ ಜನ್ಮತಳೆದವರು ಎಂಬಂತಿತ್ತು ಅವರ ರೀತಿ. ಬಾಲಶ್ವಾನ ಲೀಲಾವಿನೋದದಲ್ಲಿ ಕಳ್ಳರು ಮನಃಪಟಲದಿಂದ ನಿಧಾನವಾಗಿ ದೂರ ಸರಿದರು. ಅಷ್ಟುಹೊತ್ತಿಗೆ, ಪೋಷಕರು ಜೂನ್ ತಿಂಗಳಲ್ಲಿ ಮಕ್ಕಳಿಗೆ ಪಾಟಿಪುಸ್ತಕ ಕೊಳ್ಳುವಂತೆ, ಬಡಾವಣೆಯ ಬಹುತೇಕ ಮನೆಗಳವರು ಬಗೆಬಗೆಯ ನಾಯಿಗಳನ್ನು ಎಲ್ಲೆಲ್ಲಿಂದಲೊ ತಂದಿದ್ದರು. ಬೆಳಿಗ್ಗೆ ಸಂಜೆ ಎಲ್ಲರೂ ನಾಯಿ ಕರಕೊಂಡು ತಿರುಗುವವರೇ. ತತ್ಪರಿಣಾಮ, ಒಂದೇ ವರ್ಷದಲ್ಲಿ ಬಡಾವಣೆಯ ಜನಸಂಖ್ಯೆಯನ್ನು ನಾಯಿಗಳು ಹಿಂದೆ ಹಾಕಿದವು. ಯಾವುದೊ ನಾಯಿ ನಿಷ್ಕಾರಣವಾಗಿ ಬಗುಳಿದರೂ, ಇಡೀ ಬಡಾವಣೆಯ ನಾಯಿಗಳು ಸಹಗಾಯಕರಂತೆ ಸಾಥ್ ಕೊಡುತ್ತಿದ್ದವು. ಈ ಶ್ವಾನಮೇಳಕ್ಕೆ ಅಂಜಿ ಭಿಕ್ಷುಕರು ಸುಳಿಯಲು ಅಂಜುತ್ತಿದ್ದರು. ಬೀದಿವ್ಯಾಪಾರಿಗಳು ತಮ್ಮ ಸರಕಿನ ಜತೆ ಒಂದು ಬಡಿಗೆಯನ್ನೂ ತರುತ್ತಿದ್ದರು. ಯಾರೊ ಕಿಡಿಗೇಡಿಗಳು ಬಡಾವಣೆಗೆ ಹೆಸರೂ ಇಟ್ಟರು: 'ನಾಯಿಕಾಲನಿ'.

ಮಿಟ್ಟು ತಿಪ್ಪೆಯ ಮೇಲಿನ ಬಳ್ಳಿಯಂತೆ ಭರದಿಂದ ಬೆಳೆಯತೊಡಗಿತು. ಹೊರಗಿಂದ ಬಂದರೆ ಕಟ್ಟಿದ ಜಾಗದಲ್ಲೇ ತಕತಕ ಕುಣಿಯುತ್ತಿತ್ತು; ಹತ್ತಿರ ಹೋದರೆ ಎದೆಗೆ ಕಾಲುಕೊಟ್ಟು ನಿಲ್ಲುತ್ತಿತ್ತು; ತಲೆಸವರುತ್ತಿದ್ದರೆ ಅರೆಗಣ್ಣು ಮುಚ್ಚಿ ಸುಖ ಅನುಭವಿಸುತ್ತಿತ್ತು. ಊರಿಂದ ಬರುತ್ತಿದ್ದ ಅಪ್ಪನಿಗೆ ನಾವು ನಾಯಿ ಸಾಕಿದ್ದು ಚೂರೂ ಇಷ್ಟವಾಗಲಿಲ್ಲ. ಅದು ನಮ್ಮಿಂದ ಪಡೆವ ಸೇವೆ ಅವನಲ್ಲಿ ವಿಚಿತ್ರ ಕುದಿತ ಹುಟ್ಟಿಸಿತು. ಅವನ ಶ್ವಾನದ್ವೇಷಕ್ಕೆ ಒಂದು ಪ್ರಾಚೀನ ಕಾರಣವಿತ್ತು. ತನ್ನ ಪ್ರಾಯದಲ್ಲಿ ಸೈಕಲನ್ನು ಮಲಗಿದ ನಾಯಿಯ ಮೇಲೆ ಬಿಡಲು, ಅದು ಅವನ ಕಾಲನ್ನು ತಿರುಗಿ ಕಚ್ಚಿತ್ತು. ಆಗ ಹೊಕ್ಕಳ ಸುತ್ತ ಅವನು ಹದಿನಾರು ಇಂಜೆಕ್ಷನ್ ತೆಗೆದುಕೊಳ್ಳಬೇಕಾಯಿತು. ಈ ಗತ ನೆನಪಿನಿಂದ ಕೆರಳುತ್ತಿದ್ದ ಅವನು ಭಾವೀ ಪ್ರಿಯತಮನ ಕನಸು ಕಾಣುತ್ತ ನಾಗಾಲನ್ನು ಚಾಚಿ ಗಿಡದ ನೆರಳಿನಲ್ಲಿ ಮಲಗಿರುತ್ತಿದ್ದ ನಾಯಿಹೊಟ್ಟೆಗೆ ಹೋಗುತ್ತ ಬರುತ್ತಾ ಜಾಡಿಸುತ್ತಿದ್ದನು. 'ಬೇವಾರ್ಸಿ ನನ ಮಗಂದು. ತಿನ್ನದು ಮಲಗದು. ಬ್ಯಾರೆ ಕೇಮಿಲ್ಲ' ಎಂದು ಹರಸುತ್ತಿದ್ದನು. ಟೈಮಿಗೆ ಸರಿಯಾಗಿ ಚಹ ಕೊಡದ ಸೊಸೆ ಮೇಲಿನ ಸಿಟ್ಟನ್ನು ಅವನು ಹೀಗೆ ತೀರಿಸಿಕೊಳ್ಳುತ್ತಿದ್ದನೆಂದೇ ನನ್ನ ಗುಮಾನಿ. 'ಅತ್ತೆ ಸಿಟ್ಟು ಕೊತ್ತಿ ಮೇಲೆ' ಗಾದೆಯನ್ನು ಬದಲಿಸಿ ಹೊಸಗಾದೆ ಕಟ್ಟಿದೆ: 'ಮಾವನ ಸಿಟ್ಟು ನಾಯಿ ಮೇಲೆ.'

ನಾನು ಹೊರಗಡೆಯಿಂದ ಮನೆಗೆ ಬಂದಾಗಲೆಲ್ಲ ನಾಯಿ ಕಟ್ಟಿದತ್ತ ದೃಷ್ಟಿಹಾಯಿಸಿ, 'ಏ ನಾಯಿಗೆ ಅನ್ನ ಹಾಕಿದಿರೇನೇ?' ಎಂದು ಕೇಳುತ್ತಿದ್ದೆ. ನನಗೆ ಸರಿಯಾಗಿ ನೋಡಿಕೊಂಡಿಲ್ಲ ಎಂದು ಚಾಡಿ ಹೇಳುವಂತೆ ಮಿಟ್ಟು ವಿಚಿತ್ರ ಶಬ್ದ ಹೊರಡಿಸುತ್ತ ಮೈನುಲಿದು ಬಾಲವಲ್ಲಾಡಿಸುತ್ತಿತ್ತು. ಮುದ್ದಾಡಿ ತಲೆಯನ್ನು ಬೆರಳಿಂದ ಉಗುರಿಸಿ ಬೆನ್ನುತಟ್ಟಿದ ಬಳಿಕವೇ ಮನೆಯೊಳಗೆ ಹೋಗಲು ಅನುಮತಿಸುತ್ತಿತ್ತು. ಈ ನಾಟಕವನ್ನು ಜಗುಲಿ ಮೇಲಿಂದ ತಣ್ಣಗೆ ನೋಡುತ್ತಿದ್ದ ಅಪ್ಪ ನನ್ನೆದುರು ಏನೂ ಅನ್ನುತ್ತಿರಲಿಲ್ಲ. ಬೀಡಿಸೇದಲು ಜತೆಗೂಡುತ್ತಿದ್ದ ವಾಯುವಿಹಾರದ ಸ್ನೇಹಿತರ ಜತೆ ಮಾತಾಡುತ್ತ ಹೇಳಿದ ಮಾತೊಂದು ಕಿವಿಗೆ ಬಿತ್ತು: 'ಕಬ್ಬಣಾ ಕುಟ್ಟಿ ಇವನನ್ನ ಸಾಕಿದೆ ಸ್ವಾಮಿ. ಸಾವಿರಾರು ರೂಪಾಯಿ ಖರ್ಚುಮಾಡಿ,